ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಪೇಷ್ಟ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು :—

	ಇದೇ ವಾರಕ್ಕೆ	ಹಿಂದಿನ 5 ವರ್ಷಗಳ ಅಂದಾಜಾ.	ಚಾಲ್ತಿ.	
ಅಕ್ಕಿ	ರೂಪಾಯಿಗೆ	7	6 ರಿಂದ 6½ರ ವರಿಗೆ	ಸೇರುಗಳು.
ರಾಗಿ	...	18¾	13 ರಿಂದ 14ರ ವರಿಗೆ	ಸೇರುಗಳು.

ನಿಂತಿರುವ ಪೈರುಗಳ ಸ್ಥಿತಿ.—ರಾಗಿ ಪೈರುಗಳು ಬಾಡಿಹೋಗುತ್ತಿವೆ.

ವ್ಯವಸಾಯ ಕೆಲಸಗಳು—ಏನೂ ಇಲ್ಲ.

ಮಳೇ ಬಾರದೇ ಇರುವದರಿಂದ ಬಹಳ ಕಷ್ಟವಾಗಿದೆ.

ದನಗಳು ಬಳ್ಳೇ ಸ್ಥಿತಿಯಲ್ಲಿವೆ. ನೀರು ಸಾಕು. ಹುಲ್ಲಿನ ಖರೀದಿ ಹೆಚ್ಚಾಗುತ್ತಿದೆ.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳ ಸ್ಥಿತಿ—ಸಾಧಾರಣವಾಗಿ ಎಲ್ಲಾ ತಾಲ್ಲೂಕುಗಳಲ್ಲಿಯೂ ಮಳೆ ಇಲ್ಲದ್ದರಿಂದ ನಿಂತಿರುವ ಪೈರುಗಳು ಬಾಡಿಹೋಗುತ್ತಿವೆ.

ಕುಯ್ಯಲಾದ ಪೈರುಗಳು—ಹೊಸಕೋಟೆ ಮತ್ತು ದೇವನಹಳ್ಳಿ ತಾಲ್ಲೂಕುಗಳಲ್ಲಿ ಆಲೂಗೆಡ್ಡೆಯನ್ನೂ, ಮಾಗಡಿ ತಾಲ್ಲೂಕಿನಲ್ಲಿ ಹುಚ್ಚೆಳ್ಳನ್ನೂ ಕುಯ್ಯುತ್ತಿದ್ದಾರೆ.

10. ಕಾಲದ ಆಯತಿಯು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಮಳೆಯು ಬಾರದೆ ಇರುವದರಿಂದ ಬಹು ಕಷ್ಟವಾಗಿದೆ. ಸಾಕಾದಷ್ಟು ಆಹಾರ ಜಿನಸು ಸಿಕ್ಕುತ್ತವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಕಾರ್ಕಾಹಳ್ಳಿ, ಚನ್ನಪಟ್ಟಣ ಈ ತಾಲ್ಲೂಕುಗಳಲ್ಲಿಯೂ, ಹೊಸಕೋಟೆ ತಾಲ್ಲೂಕು ಬಿದರಹಳ್ಳಿ, ಸೂಳಬೆಲೆ, ಆನೆಗೊಂದಹಳ್ಳಿಗಳಲ್ಲಿಯೂ, ನೆಲಮಂಗಲದ ತಾಲ್ಲೂಕು ತ್ಯಾಮೆಗೊಂಡಲ, ದೊಡ್ಡಬೆಲೆ, ಗುಂದಿನಹಳ್ಳಿ, ಹುಸುದಾಲುಗಳಲ್ಲಿಯೂ ಮತ್ತು ಈಸಬಾ ಆನೆಕಲ್ಲಿನಲ್ಲಿಯೂ ಪ್ಲೇಗ್ ಇರುತ್ತಲಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಮಳೇ ಇಲ್ಲದ್ದರಿಂದ ಕುಷ್ಕೀ ಪೈರುಗಳು ಬಣಗುತ್ತಾ ಇವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಗುಡಿಬಂಡೆ ಸಬ್ ತಾಲ್ಲೂಕಿನಲ್ಲಿ ಹುರುಳಿಯನ್ನು ಬಿತ್ತುತ್ತಿದ್ದಾರೆ.

ಕುಯ್ಯಲಾದ ಪೈರು—ಏನೂ ಇಲ್ಲ.

10. ಕಾಲದ ಆಯತಿಯು ಸುಮಾರಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ. ಆದರೆ, ಆಹಾರ ಜಿನಿಸಿಯಲ್ಲಿ ಮುಖ್ಯವಾದ ರಾಗಿಯ ಬೆಲೆಯು ಬಹು ಚಡಾವಿನಲ್ಲಿದೆ.

11. ಕೋಲಾರದ ಚಿನ್ನದ ಗಣಿಯಲ್ಲಿಯೂ ಮತ್ತು ಬಾರಂಗ್‌ಪೇಟೆ ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳಲ್ಲಿಯೂ ಮತ್ತು ಈಸಬಾ ಕೋಲಾರಿನಲ್ಲಿಯೂ ಅಲ್ಲಲ್ಲಿ ಆದ ಕೆಲವು ಪ್ಲೇಗ್ ಕೇಸುಗಳು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ಬಾಗೇಪಲ್ಲಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ದನಗಳಿಗೆ "ಸಪ್ಪೇರೋಗವು" ಇರುವದು ಹೊರ್ತು, ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಅವು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ಬಿತ್ತನೆಯಾದ ಪೈರುಗಳು—ತುಮಕೂರು, ಪಾವಗಡ ಇವುಗಳಲ್ಲಿ ಹುರುಳಿ ಮತ್ತು ಭತ್ತ; ತಿಪಟೂರಿನಲ್ಲಿ ಮೆಣಸಿನಕಾಯಿ, ಹುರುಳಿ, ಜೋಳ, ಮತ್ತು ಸಾವೆ

ಕುಯ್ಯಲಾದ ಪೈರುಗಳು—ಗುಬ್ಬಿ, ತಿಪಟೂರು, ಪಾವಗಡ, ಇವುಗಳಲ್ಲಿ ಭತ್ತ; ಗುಬ್ಬಿಯಲ್ಲಿಯೂ ಮತ್ತು ಕುಣಿಗಲಿನಲ್ಲಿಯೂ ಕಬ್ಬು; ಪಾವಗಡದಲ್ಲಿ ರಾಗಿ; ಗುಬ್ಬಿಯಲ್ಲಿಯೂ ಮತ್ತು ತಿಪಟೂರಿನಲ್ಲಿಯೂ ಹುಚ್ಚೆಳ್ಳು ಮತ್ತು ಜೋಳ; ತಿಪಟೂರಿನಲ್ಲಿ ಉದ್ದೂ ಮತ್ತು ಹೆಸರು.

10. ಕಾಲದ ಆಯತಿಯು ಚೆನ್ನಾಗಿದೆ. ಆದರೆ, ಎಲ್ಲಾ ತಾಲ್ಲೂಕುಗಳಲ್ಲಿಯೂ ಖುಷ್ಕೀ ಪೈರುಗಳಿಗೆ ಮಳೆಯು ಇನ್ನೂ ಬೇಕಾಗಿದೆ. ತೀರಾ, ತಿಪಟೂರು, ಪಾವಗಡ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ನೀರಿನ ಕ್ಷಾಮ ಉಂಟಾಗಿದೆ.

11. ಜನಾರೋಗ್ಯವು ಚೆನ್ನಾಗಿದೆ. ಆದರೆ, ಈಸಬಾ ತುಮಕೂರಿನಲ್ಲಿ ಪ್ಲೇಗ್ ಪುರೂ ಆಗಿದೆ ಮತ್ತು ಪಾವಗಡದ ತಾಲ್ಲೂಕು ಗೌಡತಿ ಎಂಬ ಗ್ರಾಮದಲ್ಲಿ ಕಾಲರಾ ಇನ್ನೂ ಇದ್ದುಕೊಂಡಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

2926

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಹೆಗ್ಗಡದೇವನಕೋಟೆ, ನಂಜನಗೂಡು, ಮಳವಳ್ಳಿ, ಮಂಡ್ಯ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭತ್ತದ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಮೈಸೂರು, ಚಾಮರಾಜನಗರ, ಕೃಷ್ಣರಾಜಪೇಟೆ, ಈ ತಾಲ್ಲೂಕುಗಳಿಗೆ ಸೇರಿದ ಕೆಲವು ಗ್ರಾಮಗಳಲ್ಲಿ ನಿಂತಿರುವ ಪೈರುಗಳು ಬಾಡಿ ಹೋಗುತ್ತಿರುವದು ಹೊರತು, ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಅವುಗಳು ಒಳ್ಳೇ ಸ್ಥಿತಿಯಲ್ಲಿವೆ. ನಂಜನಗೂಡು ತಾಲ್ಲೂಕಿನಲ್ಲಿ ರಾಗೀ ಪೈರು ಬಾಡಿ ಹೋಗುತ್ತಿದೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಗುಂಡ್ಲುಪೇಟೆ ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿ ಹುರುಳಿ; ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಉದ್ದೂ ಮತ್ತು ಹೆಸರು; ಇವುಗಳು ಬಿತ್ತಲ್ಪಡುತ್ತಿವೆ.

ಕುಯ್ಯಲಾದ ಪೈರುಗಳು—ಮೈಸೂರು, ಹುಣಸೂರು, ಎಡತೊರೆ, ಹೆಗ್ಗಡದೇವನಕೋಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ರಾಗಿ; ಹೆಗ್ಗಡದೇವನಕೋಟೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಎಳ್ಳು; ಹುಣಸೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಸಾವೆ ಮತ್ತು ನವಣೆ; ಗುಂಡ್ಲುಪೇಟೆ ಮತ್ತು ಮಂಡ್ಯದ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಜೋಳ; ಇವುಗಳು ಕುಯ್ಯಲ್ಪಡುತ್ತಿವೆ.

10. ಕಾಲದ ಆಯತಿಯು ಚೆನ್ನಾಗಿದೆ. ಎಡತೊರೆ, ಹೆಗ್ಗಡದೇವನಕೋಟೆ, ಈ ಎರಡು ತಾಲ್ಲೂಕುಗಳು ಹೊರತು ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ನಿಂತಿರುವ ಪೈರುಗಳಿಗೆ ಮಳೆಯು ಬೇಕಾಗಿದೆಯೆಂದು ರಿಪೋರ್ಟಾಗಿದೆ.

11. ಜನಾರೋಗ್ಯವು ಚೆನ್ನಾಗಿದೆ. ಆದರೆ, ಮೈಸೂರು, ಹುಣಸೂರು, ಗುಂಡ್ಲುಪೇಟೆ, ನಂಜನಗೂಡು, ಮಂಡ್ಯ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿಯೂ ಮತ್ತು ನಂಜನಗೂಡು, ಮೆಂಡ್ಯ, ಇವುಗಳ ಕಸಬಾಗಳಲ್ಲಿಯೂ ಪ್ಲೇಗ್ ಇರುತ್ತಲಿದೆ.

12. ಎಲ್ಲಾ ತಾಲ್ಲೂಕುಗಳಲ್ಲಿಯೂ ದನಗಳು ಆರೋಗ್ಯವಾಗಿವೆಯೆಂದು ರಿಪೋರ್ಟಾಗಿದೆ. ಎಲ್ಲಾ ಕಡೆಯಲ್ಲಿಯೂ ನೀರೂ, ಹುಲ್ಲೂ ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಭತ್ತ, ರಾಗಿ, ಹರಳು, ಹಬ್ಬು, ತೊಗರಿ, ಮೆಣಸಿನಕಾಯಿ ಮುಂತಾದವುಗಳು ಒಳ್ಳೇ ಸ್ಥಿತಿಯಲ್ಲಿವೆ. ಅರಕೀಕೆರೆ, ಮತ್ತು ಚೆನ್ನರಾಯಪಟ್ಟಣ ಈ ತಾಲ್ಲೂಕುಗಳಲ್ಲಿ ನಿಂತಿರುವ ಪೈರುಗಳಿಗೆ ಮಳೆಯು ಬೇಕಾಗಿದೆ.

ಕುಯ್ಯಲಾದ ಪೈರುಗಳು—ಹಾಸನ, ಬೇಲೂರು, ಅರಕಲ್‌ಗೂಡು, ಈ ತಾಲ್ಲೂಕುಗಳಲ್ಲಿಯೂ ಮತ್ತು ಆಲೂರು ಸಬ್ ತಾಲ್ಲೂಕಿನಲ್ಲಿಯೂ ಗಿಡ್ಡರಾಗಿ; ಅರಕಲ್‌ಗೂಡು ತಾಲ್ಲೂಕಿನಲ್ಲಿ ತಡಗಣಿ; ಚೆನ್ನರಾಯಪಟ್ಟಣದ ತಾಲ್ಲೂಕಿನಲ್ಲಿ ಕೆರೆಗಳ ಕೆಳಗೆ ಭತ್ತ ಮತ್ತು ಹಬ್ಬು; ಕುಯ್ಯಲಾಗುತ್ತಿವೆ.

ಕಟಾವಾದ ಪೈರುಗಳ ಉತ್ಪತ್ತಿ—ಹಾಸನದ ತಾಲ್ಲೂಕಿನಲ್ಲಿ ಗಿಡ್ಡರಾಗಿ 8ರಿಂದ 12 ಆಣೆ ವರಿಗೆ. ಆಲೂರು ಸಬ್ ತಾಲ್ಲೂಕಿನಲ್ಲಿ ಗಿಡ್ಡರಾಗಿ, 12 ಆಣೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಹಾಸನ, ಬೇಲೂರು, ಚೆನ್ನರಾಯಪಟ್ಟಣ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗು, ಮತ್ತು ಮಂಜರಾಬಾದ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಛಳೇಜ್ವರ ಮತ್ತು ಜ್ವರ, ಇವುಗಳು ಇರುವುದು ಹೊರತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಯಾವವಂದರೆ, ಭತ್ತ, ರಾಗಿ, ಜೋಳ, ಹಬ್ಬು, ಇವುಗಳು ಒಳ್ಳೇ ಸ್ಥಿತಿಯಲ್ಲಿವೆ. ಮಲೆನಾಡು ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಅಡಿಕೇ ಫಸಲಿಗೆ "ಕೊಳೇ ರೋಗವು" ಹಿಡಿದು ಇದೆ.

ಬಿತ್ತನೆಯಾದ ಪೈರುಗಳು—ಶಿವಮೊಗ್ಗ, ಚನ್ನಗಿರಿ, ಹೊನ್ನಾಳಿ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ನವಣೆ, ಸಾವೆ ಹುರುಳಿ, ಇವುಗಳನ್ನು ಬಿತ್ತುತ್ತಿದ್ದಾರೆ.

10. ಕಾಲದ ಆಯತಿಯು ಸಾಧಾರಣವಾಗಿ ಚೆನ್ನಾಗಿದೆ. ಸಾಕಾದಷ್ಟು ಆಹಾರ ಜಿನಸು ಸಿಕ್ಕುತ್ತವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಶಿಕಾರಿಪುರ, ತೀರ್ಥಹಳ್ಳಿ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಸಿಡುಬು ಇರುತ್ತಿದೆ. ಹೊನ್ನಾಳಿ ತಾಲ್ಲೂಕಿನಲ್ಲಿಯೂ, ಕುಂಸಿ ಸಬ್ ತಾಲ್ಲೂಕಿನಲ್ಲಿಯೂ ಮತ್ತು ಕಸಬಾ ಶಿವಮೊಗ್ಗಿಯಲ್ಲಿಯೂ ಪ್ಲೇಗ್ ಇರುತ್ತಲಿದೆ.

12. ಶಿವಮೊಗ್ಗ, ಹೊನ್ನಾಳಿ, ಸಾಗರ, ಈ ತಾಲ್ಲೂಕುಗಳು ಹೊರತು, ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಗೋಮಾರೀ ರೋಗವು ಇರುತ್ತಲಿದೆ. ಹುಲ್ಲೂ, ನೀರೂ ಸಿಕ್ಕುತ್ತವೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಕೊಪ್ಪ, ಎಡೇಹಳ್ಳಿ, ಶೃಂಗೇರಿ, ಇವುಗಳಲ್ಲಿ ಭತ್ತದ ಸಸಿಯನ್ನೂ ಮತ್ತು ಮೂಡಿಗೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ರಾಗಿಯ ಸಸಿಯನ್ನೂ ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಚಿಕ್ಕಮಗಳೂರು, ಕಡೂರು, ತರೀಕೆರೆ, ಮೂಡಿಗೆರೆ, ಎಡೇಹಳ್ಳಿ, ಇವುಗಳಲ್ಲಿ ಭತ್ತ; ಚಿಕ್ಕಮಗಳೂರು, ಕಡೂರು, ತರೀಕೆರೆ, ಮೂಡಿಗೆರೆ, ಇವುಗಳಲ್ಲಿ ರಾಗಿ; ಚಿಕ್ಕಮಗಳೂರಿನಲ್ಲಿಯೂ ಮತ್ತು ತರೀಕೆರೆಯಲ್ಲಿಯೂ ತೊಗರಿ ಮತ್ತು ಅವರೆ; ಕಡೂರಿನಲ್ಲಿಯೂ ಮತ್ತು ತರೀಕೆರೆಯಲ್ಲಿಯೂ ಜೋಳ; ಕಡೂರಿನಲ್ಲಿಯೂ ಮತ್ತು ತರೀಕೆರೆಯಲ್ಲಿಯೂ ಹುರುಳಿ, ಮತ್ತು ನವಣೆ; ಕಡೂರಿನಲ್ಲಿ ಸಾವೆ ಮತ್ತು ಧನಿಯಾ; ತರೀಕೆರೆಯಲ್ಲಿ ಹರಳು, ಖುರಾಸಾನಿ ಮತ್ತು ಸಜ್ಜೆ; ಕೊಪ್ಪದಲ್ಲಿಯೂ ಎಡೇಹಳ್ಳಿಯಲ್ಲಿಯೂ ಕಬ್ಬು; ಕೊಪ್ಪದಲ್ಲಿಯೂ ಮತ್ತು ಮೂಡಿಗೆರೆಯಲ್ಲಿಯೂ ಯಾಲಕ್ಕಿ; ಮೂಡಿಗೆರೆಯಲ್ಲಿಯೂ ಮತ್ತು ಎಡೇಹಳ್ಳಿಯಲ್ಲಿಯೂ ಕಾಫಿ; ಕೊಪ್ಪದಲ್ಲಿಯೂ ಮತ್ತು ಶೃಂಗೇರಿಯಲ್ಲಿಯೂ ಅಡಿಕೆ; ಇವುಗಳೆಲ್ಲಾ ಬಳಿ ಸ್ಥಿತಿಯಲ್ಲಿವೆ. ಶೃಂಗೇರಿಯಲ್ಲಿಯೂ ಮತ್ತು ಕೊಪ್ಪದಲ್ಲಿಯೂ ಅಡಿಕೇ ಫಸಲಿಗೆ "ಕೊಳೆ ರೋಗವು" ಇನ್ನೂ ಹತ್ತಿದೆಯೆಂದು ರಿಪೋರ್ಟಾಗಿದೆ.

ಬಿತ್ತನೆ ಆದ ಪೈರು—ಕಡೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಹುರುಳಿ.

ಕುಯ್ಯಲಾದ ಪೈರುಗಳು—ಚಿಕ್ಕಮಗಳೂರಿನಲ್ಲಿ ರಾಗಿ ಉತ್ಪತ್ತಿ 8 ಆಣೆ; ಕಡೂರಿನಲ್ಲಿ ಕಬ್ಬು, ಹುರುಳಿ, ಉದ್ದು, ತಡಗಣಿ ಮತ್ತು ಹುಚ್ಚೆಳ್ಳು; ತರೀಕೆರೆಯಲ್ಲಿ ಹುಚ್ಚೆಳ್ಳು, ಮೆಣಸಿನಕಾಯಿ ಮತ್ತು ಧನಿಯಾ, ಕೊಪ್ಪದಲ್ಲಿ ಯಾಲಕ್ಕಿ—ಉತ್ಪತ್ತಿ 6 ಆಣೆ, ಮತ್ತು ಇದೇ ಮೂಡಿಗೆರೆಯಲ್ಲಿ ಸ್ವಲ್ಪಮಟ್ಟಿಗೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜೆನಸು ಸಾಕು.

11. ಕಸಬಾ ಚಿಕ್ಕಮಗಳೂರಿನಲ್ಲಿ ಪ್ಲೇಗು ಮತ್ತು ಮೂಡಿಗೆರೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಸಿಡುಬು, ಇವು ಇರುವದು ಹೊರ್ತು ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ತರೀಕೆರೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿಯೂ ಮತ್ತು ಮೂಡಿಗೆರೆ, ಎಡೇಹಳ್ಳಿ ಇವುಗಳ ಕೆಲವು ಭಾಗಗಳಲ್ಲಿಯೂ "ದೊಡ್ಡರೋಗವು" ಪುರೂ ಆಗಿದೆಯೆಂದು ರಿಪೋರ್ಟಾಗಿದೆ. ರೋಗದಿಂದ ನರಳುವ ಜಾನುವಾರುಗಳಿಗೆ ಕ್ಯಾಟಲ್ ಡಿಸೀಜ್ ಇನ್ಸ್ಪೆಕ್ಟರವರ ಸಲಹೇ ಮೇರಿಗೆ ಚಿಕಿತ್ಸೆಗಳು ಮಾಡಲ್ಪಡುತ್ತಿವೆಯೆಂದೂ ರಿಪೋರ್ಟಾಗಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಕಪಿಲೇ ಭಾವಿಗಳ ಕೆಳಗೂ ಮತ್ತು ಪೂರೀಕಣಿವೆ ನಾಲಾಗಳ ಕೆಳಗೂ ಇರುವ ನಿಂತಿರುವ ಪೈರುಗಳು ಹೊರ್ತು, ಮಿಕ್ಕವುಗಳು ಬಾಡಿಹೋಗುತ್ತಿವೆ. ಚಿತ್ರದುರ್ಗ, ದೇವನಗೆರೆ, ಹೊಳಲ್ಕೆರೆ, ಈ ತಾಲ್ಲೂಕುಗಳ ಕೆಲವು ಭಾಗಗಳು ಹೊರ್ತು, ಡಿಸ್ಟ್ರಿಕ್ಟಿನ ಮಿಕ್ಕ ಎಲ್ಲಾ ಕಡೆಗಳಲ್ಲಿಯೂ ಮಳೆಯು ಅತ್ಯಾವಶ್ಯಕವಾಗಿ ಬೇಕಾಗಿದೆ.

ಬಿತ್ತನೆಯಾದ ಪೈರು—ಹೊಳಲ್ಕೆರೆ ಮತ್ತು ದೇವನಗೆರೆ ತಾಲ್ಲೂಕುಗಳಲ್ಲಿ ಅರಳೆ.

ಕುಯ್ಯಲಾದ ಪೈರು—ಏನೂ ಇಲ್ಲ.

10. ಕಾಲದ ಆಯತಿಯು ಸುಮಾರಾಗಿದೆ. ಆಹಾರ ಜೆನಸು ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು,
1907ನೆಯ ವರ್ಷದ ಸೆಪ್ಟಂಬರ್ 21ನೆಯ ತಾರೀಖು.

ಎ. ರಂಗಸ್ವಾಮಿ ಐಯ್ಯಂಗಾರ್,
ರೆವಿನ್ಯೂ ಕಮಿಷನರ್.